



# ವಿನಾಯಕನ ವಿಭಿನ್ನ ಅವತಾರ

★ ಚಿತ್ರ- ಬರಹ:
**ಗಣಂಗೂರು ನಂಜೇಗೌಡ**



ಗಣೇಶನನ್ನು ಚಿತ್ರಿಸುತ್ತಿರುವ ಕಲಾವಿದ ಸಂದೇಶ್

ಲಂಬೋದರ, ವಕ್ರತುಂಡ, ಗಜಮುಖ, ಏಕದಂತ, ವಿಘ್ನೇಶ, ವಿನಾಯಕ, ಗಣನಾಯಕ, ಮೂಷಿಕ ವಾಹನ, ಮೋದಕ ಪ್ರಿಯ– ಹೀಗೆ ಭಕ್ತರಿಂದ ನಾನಾ ಹೆಸರುಗಳಿಂದ ಕರೆಸಿಕೊಳ್ಳುವ ಗಣೇಶನನ್ನು ವಿಭಿನ್ನವಾಗಿ ಚಿತ್ರಿಸುವ ಕಲೆಯನ್ನು ಸಂದೇಶ್ ಎಂಬ ಯುವಕ ಕರಗತ ಮಾಡಿಕೊಂಡಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕು ಶ್ರೀನಿವಾಸ ಅಗ್ರಹಾರ ಗ್ರಾಮದ ಈ ಪ್ರತಿಭೆ 10 ವರ್ಷದ ಬಾಲಕನಾಗಿದ್ದಾಗಿನಿಂದ ಗಣೇಶನನ್ನು ಬಗೆ ಬಗೆಯಾಗಿ ಚಿತ್ರಿಸುತ್ತಾ ಬಂದಿದ್ದಾರೆ. ಮರಳು, ಮರದ ಎಲೆ, ಗಾಜಿನ ಬಳೆ, ಬೆಂಕಿ ಕಡ್ಡಿ, ಹತ್ತಿ, ನಾಣ್ಯ, ತೆಂಗಿನ ನಾರು, ಹಣೆಬಿಂದಿ ಇತರ ವಸ್ತುಗಳನ್ನು ಬಳಸಿ ಗಣಪನಿಗೆ ಆಕರ್ಷಕ ರೂಪ ನೀಡುತ್ತಾರೆ. ಥರ್ಮಾಕೋಲ್ ಮತ್ತು ಕಾಗದದ ಮೇಲೆ ಕಪ್ಪು –ಬಿಳುಪು ಗಣೇಶನನ್ನು ಇವರು ಚಿತ್ರಿಸಬಲ್ಲರು. ಲೇಖನಿಯಿಂದ ಚುಕ್ಕೆ ಗಣೇಶನನ್ನು ಕೆಲವೇ ನಿಮಿಷಗಳಲ್ಲಿ ಮೂಡಿಸುವ ಕಲೆಯನ್ನೂ ಸಿದ್ಧಿಸಿಕೊಂಡಿದ್ದಾರೆ.

ಮೈಸೂರಿನ ಕಲಾ ನಿಕೇತನ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಅಂತಿಮ ವರ್ಷದ ಬಿವಿಎ (ಬ್ಯಾಚಲರ್ ಆಫ್ ವಿಷುವಲ್ ಆರ್ಟ್ಸ್) ಕಲಿಯುತ್ತಿರುವ ಸಂದೇಶ್, ಚಿತ್ರಕಲೆಯಲ್ಲಿ ಗಣೇಶನನ್ನು ಪರಕಾಯ ಪ್ರವೇಶ ಮಾಡಿಸುತ್ತಾರೆ. ಇವರ ಕುಂಚದಲ್ಲಿ ಅರಳಿದ ಗಣೇಶ ಕೃಷ್ಣನಂತೆ ಕೊಳಲು ಹಿಡಿದು, ಅಂಬೆಗಾಲಿಡುತ್ತಾ ಬೆಣ್ಣೆ ಮೆಲ್ಲುತ್ತಾನೆ. ತಬಲ ವಾದ್ಯ ನುಡಿಸುತ್ತಾನೆ. ಮಣ್ಣಿನಲ್ಲೂ ಮೈದಳೆದು ನಿಲ್ಲುತ್ತಾನೆ.

ಪೋಸ್ಟರ್ ಮತ್ತು ಅಕ್ರಾಲಿಕ್ ಬಣ್ಣ ಬಳಸಿ ಗ್ರಾಮೀಣ ಜನ ಜೀವನದ ಸೊಗಡು, ಪ್ರಕೃತಿ, ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ಬಿಡಿಸುವ ಈ ಕಲಾವಿದ 'ಉಳಿದೆಲ್ಲ ಚಿತ್ರಗಳಿಗಿಂತ ಗಣೇಶನನ್ನು ಚಿತ್ರಿಸುವುದರಲ್ಲಿ ನನಗೆ ಹೆಚ್ಚು ಆಸಕ್ತಿ' ಎಂದು ಹೇಳುತ್ತಾರೆ. 22ರ ಹರೆಯದಲ್ಲೇ 'ಒಂದು– ಘಟನೆಗಳು ಹಲವಾರು' ಹೆಸರಿನ ಪತ್ತೇದಾರಿ ಕಾದಂಬರಿಯನ್ನೂ ಬರೆದಿರುವ ಸಂದೇಶ್ ಅವರಿಗೆ ಚಿತ್ರಕಲೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಹಂಬಲ.